ಶ್ರೀ ಆರ್.ಕೃಷ್ಣಪ್ಪ (ಜಯಮಹಲ್):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರಿನಲ್ಲಿರುವ ಚಿತ್ರಕಲಾ ಪರಿಷತ್ತಿಗೆ ಸರ್ಕಾರವು ಪ್ರತಿ ವರ್ಷ ನೀಡುತ್ತಿರುವ ನೆರವಿನ ಪ್ರಮಾಣವೆಷ್ಟು?

ಆ) 1995-96ರಲ್ಲಿ ಹೆಚ್ಚಿನ ನೆರವನ್ನು ನೀಡಬೇಕೆಂದು ಕೋರಲಾಗಿದೆಯೇ?

ಇ) ಈ ಚಿತ್ರಕಲಾ ಪರಿಷತ್ತಿನಲ್ಲಿ ಸರ್ಕಾರವು ನೀಡುತ್ತಿರುವ ಅನುದಾನವನ್ನು ಸರಿಯಾಗಿ ಉಪಯೋಗಿಸಿಕೊಳ್ಳಲಾಗುತ್ತಿದೆಯೇ?

ಈ) ಈ ಚಿತ್ರಕಲಾ ಪರಿಷತ್ತಿನ ಮೇಲೆ ಸರ್ಕಾರಕ್ಕೆ ಇರತಕ್ಕ ಅಧಿಕಾರಗಳೇನು?

ಶ್ರೀ ಡಿ.ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು):-

ಅ) ರೂ. 12,50,000/

ಆ) -- ಇಲ್ಲ --

ಇ) -- ಹೌದು --

ಈ) ಇತರೆ ಅನುದಾನಿತ ಸಂಸ್ಥೆಗಳ ಮೇಲಿರುವಂತೆ.

ವಿಷಯ:- 1996ರ ರಾಷ್ಟ್ರೀಯ ಕ್ರೀಡೆಗಾಗಿ ಕೋರಮಂಗಲದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 270(62)

ಶ್ರೀ ಆರ್.ಕೃಷ್ಣಪ್ಪ (ಜಯಮಹಲ್) :- ಮಾನ್ಯ ಯುವಜನ ಸೇವಾ ಮತ್ತು ಕ್ರೀಡಾ

ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) 1996ರ ರಾಷ್ಟ್ರೀಯ ಕ್ರೀಡೆಗಾಗಿ ಬೆಂಗಳೂರಿನ ಕೋರಮಂಗಲದ ಬಳಿ ಕ್ರೀಡಾಂಗಣ ನಿರ್ಮಾಣವನ್ನು ಯಾವಾಗ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ;

ಆ) ಹಾಗಿದ್ದಲ್ಲಿ ಅದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು;

ಇ) ಇದಕ್ಕಾಗಿ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಈ) ಈ ಕ್ರೀಡಾಂಗಣ ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರ ಹಾಗೂ ಖಾಸಗಿಯವರು ನೀಡಲಾಗಿರುವ ಹಣದ ಪ್ರಮಾಣವೆಷ್ಟು?

ಉ) ಈ ಕ್ರೀಡಾಂಗಣವನ್ನು ಕಟ್ಟಲು ಟೆಂಡರುಗಳನ್ನು ಕರೆಯಲಾಗಿದೆಯೇ;

ಊ) ಹಾಗಿದ್ದಲ್ಲಿ ಯಾರಿಗೆ ಟೆಂಡರುಗಳನ್ನು ಕೊಡಲಾಗಿದೆ;

ಶ್ರೀ ಆಜಯ್‌ಕುಮಾರ್ ಸರ್‌ನಾಯಕ್ (ಯುವಜನ ಸೇವಾ ಮತ್ತು ಕ್ರೀಡಾ ಸಚಿವರು):-

ಅ) 1996ರ ನವೆಂಬರ್ ತಿಂಗಳೊಳಗಾಗಿ

ಆ) ರೂ. 6, 6 1, 34, 68000(ರೂ. ಆರು ಕೋಟಿ ಆರವತ್ತೊಂದು ಲಕ್ಷ ಮೂವತ್ನಾಲ್ಕು ಸಾವಿರದ ಆರು ನೂರ ಎಂಭತ್ತು ಮಾತ್ರ)

ಇ) 4.35 ಎಕರೆ

ಈ) ಈ ಕ್ರೀಡಾಂಗಣ ನಿರ್ಮಾಣ ಕಾರ್ಯವು ಸೇರಿದಂತೆ ರಾಷ್ಟ್ರೀಯ ಕ್ರೀಡೆಗಳ ಎಲ್ಲಾ ಪೂರ್ವಭಾವಿ ಸಿದ್ದತೆಗಳಿಗೆ ಅಂದಾಜು ರೂ. 60.00 ಕೋಟಿಗಳ ಹಣದ ಅವಶ್ಯಕತೆಯಿದ್ದು ಈ ಹಣವನ್ನು ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ ಮತ್ತು ಪ್ರಾಯೋಜಕರುಗಳಿಂದ ಭರಿಸಲಾಗುವುದು.

ಊ) -- ಹೌದು --

ಊ) ಮೆ: ಭಂಡಾರಿ ಬಿಲ್ಡರ್ಸ್(ಪೈ) ಲಿಮಿಟೆಡ್, ರಹೆಜಾ ಚೇಂಬರ್ಸ್ ಮ್ಯೂಸಿಯಂ.

ವಿಷಯ:- ಮಕ್ಕಳ ಪುಸ್ತಕಗಳ ಹೊರೆ ಇಳಿಸುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 273(64)

ಶ್ರೀ ಆರ್.ಕೃಷ್ಣಪ್ಪ (ಜಯಮಹಲ್) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಕ್ಕಳು ಪ್ರತಿ ದಿನ ಶಾಲೆಗೆ ತೆಗೆದುಕೊಂಡು ಹೋಗತಕ್ಕ ಪುಸ್ತಕಗಳ ಹೊರೆ ಇಳಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೆ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

ಅ) ಪರಿಶೀಲಿಸಲಾಗಿದೆ.

ಆ) ಪಠ್ಯ ಪುಸ್ತಕಗಳ ಸಂಖ್ಯೆ ಕಡಿಮೆ ಮಾಡಲು ಪುಟ ಸಂಖ್ಯೆ ಮಿತಿಗೊಳಿಸುವುದು, ಕಲಿಸುವ ವಿಷಯ ಹಾಗೂ ಮನೆ ಪಾಠವನ್ನು ಸಹ ಮಕ್ಕಳಿಗೆ ಹೊರೆಯಾಗದಂತೆ ಶಿಕ್ಷಕರಿಗೆ ಸರಿಯಾದ ಮಾರ್ಗದರ್ಶನ ನೀಡುವುದು, ಎಲ್ಲಾ ಶಿಕ್ಷಕರಿಗೆ ಕಾಲಕಾಲಕ್ಕೆ ಸೇವಾ ನಿರತ ತರಬೇತಿ ನೀಡುವುದು ಸೇರಿದೆ. ಈ ಬಗ್ಗೆ ದಿನಾಂಕ: 20-2-1993 ಮತ್ತು ದಿನಾಂಕ:28-5-1994ರಲ್ಲಿ ಎಲ್ಲಾ ಉಪ ನಿರ್ದೇಶಕರಿಗೆ ಸುತ್ತೋಲೆ ಹೊರಡಿಸಿ ಪುಸ್ತಕದ ಹೊರೆ ಕಡಿಮೆ ಮಾಡಲು ವಿವಿಧ ಕ್ರಮ ಕೈಗೊಳ್ಳಲು ತಿಳಿಸಿದೆ.

ವಿಷಯ:- ಬಿ.ಎಂ.ಎಸ್.ಹುಳಿಯಾರು ಕಾಲೇಜಿನ ಕಟ್ಟಡ ನಿರ್ಮಾಣ.